ಕೆರೆಸಂರಕ್ಷಣೆಗೆ ಕಾನೂನು ತಿದ್ದುಪಡಿ:

1063 (1904); ಶ್ರೀ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕೆರೆ ಸಂರಕ್ಷಣೆ ಕಾನೂನಿಯಲ್ಲಿಯೇ ಕೆಲ ತಿದ್ದುಪಡಿ ತರಲು ಸರ್ಕಾರ ನಿರ್ಧರಿಸಿದೆಯೇ;

ಆ) ಕೆರೆಗಳ ರಕ್ಷಣೆಗಾಗಿಯೇ ರಚನೆಯಾಗಿರುವ ಕೆರೆ ಅಭಿವೃದ್ಧಿ ಪ್ರಾಧಿಕಾರದ ಈಗಿರುವ ಕಾನೂನು ಏನಿದೆ:

ಇ) ಇದರಿಂದ ಕೆರೆ ಸಂರಕ್ಷಣೆ ಸಾಧ್ಯವಾಗುತ್ತಿಲ್ಲವೇ; ಯಾವ ಲೋಪದಿಂದ ಸಮಸ್ಯೆ ಸೃಷ್ಟಿಯಾಗಿದೆ?

ಈ) ಈಗ ಬದಲಾವಣೆ ತರಲು ಮುಂದಾಗಿರುವ ಇಲಾಖೆ ಯಾವ ಹಂತದಲ್ಲಿ ತಿದ್ದುಪಡಿ ತರಲಿದೆ: ಇದರಿಂದ ಯಾವ ರೀತಿಯಲ್ಲಿ ಯಶಸ್ಸು ಸಾಧ್ಯವಾಗುತ್ತದೆ:

ಉ) ರಾಜ್ಯದ ಎಲ್ಲಾ ಕೆರೆಗಳನ್ನು ಇದರಿಂದ ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯವೇ;

ಊ) ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಕೆರೆಗಳ ನೀರು ಕಲುಷಿತಗೊಂಡು ಹಾಳಾಗುವುದನ್ನು ತಡೆಯಲು ಹೊಸ ಬದಲಾವಣೆಯನ್ನು ಮಾಡಲಾಗುವುದೇ?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು 2002ನೇ ಸಾಲಿನಲ್ಲಿ ಸೊಸೈಟಿ ನಿಯಮಾವಳಿಗಳ ಪ್ರಕಾರ ಸ್ಥಾಪನೆ ಮಾಡಿದ್ದು, ಈ ಪ್ರಾಧಿಕಾರಕ್ಕೆ ಇಲ್ಲಿಯವರೆಗೆ ಯಾವುದೇ ಕಾಯ್ದೆ ಹಾಗೂ ನಿಯಮಗಳನ್ನು ಜಾರಿಗೊಳಿಸಿರುವುದಿಲ್ಲ. ಆದುದ್ದರಿಂದ ಕಾನೂನಿಗೆ ತಿದ್ದುಪಡಿ ತರುವ ಅಂಶ ಉದ್ಭವಿಸುವುದಿಲ್ಲ.

ಆ) ಕೆರೆ ಅಭಿವೃದ್ಧಿ ಪ್ರಾಧಿಕಾರವು 2002 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ 12 ಇಎನ್‌ಜಿ 2002 ದಿನಾಂಕ: 10.07.2002 ರನ್ವಯ

ಕರ್ನಾಟಕ ಸಂರಕ್ಷಣೆ ಮತ್ತು ಸೌಂದರ್ಯೀಕರಣ ಕಾಯ್ದೆ 1960ರ ಅಡಿಯಲ್ಲಿ ಸರ್ಕಾರದಿಂದ ನ್ಯೂಂದಾಯಿಸಲ್ಪಟ್ಟ ಸಂಸ್ಥೆಯಾಗಿ ರಚಿಸಲ್ಪಟ್ಟಿರುತ್ತದೆ. ಈ ಪ್ರಾಧಿಕಾರವು ಲಾಭರಹಿತ ಸಂಸ್ಥೆಯಾಗಿರುತ್ತದೆ. ಆದರೆ, ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಾಲಿ ಕೆರೆಗಳ ಒತ್ತುವರಿದಾರರ / ಮಾಲಿನ್ಯಗೊಳಿಸುವವರ ವಿರುದ್ಧ ಕಾನೂನಿನ್ವಯ ಯಾವುದೇ ಕ್ರಮವನ್ನು ಜರುಗಿಸಲು ಶಾಸನಬದ್ಧ ಅಧಿಕಾರ ಇರುವುದಿಲ್ಲ.

ಇ) ಹೌದು, ಕೆರೆಗಳಲ್ಲಿ ತ್ಯಾಜ್ಯವನ್ನು ಮತ್ತು ಮಾಲಿನ್ಯವನ್ನು ತಡೆದು, ಕೆರೆ ಅಂಗಳಗಳಲ್ಲಿರುವ ಒತ್ತುವರಿ ತೆರವು ಮಾಡಿ ಕೆರೆಯನ್ನು ಅಭಿವೃದ್ಧಿ ಗೊಳಿಸಲು ಪ್ರಾಧ್ಯವಿರುವುದಿಲ್ಲ. ಶಾಸನಬದ್ಧ ಅಧಿಕಾರವು ಪ್ರಾಧಿಕಾರಕ್ಕೆ ಇಲ್ಲದ ಕಾರಣ ಕೆರೆಗಳ ಸಂರಕ್ಷಣೆ ಸಾಧ್ಯವಾಗುತ್ತಿಲ್ಲ.

ಈ) ಮಾನ್ಯ ಉಚ್ಚ ನ್ಯಾಯಾಲಯದ ಡಬ್ಲ್ಯೂಪಿ81ಸ್ಸ್/2008ರ ಅಂತಿಮ ತೀರ್ಪಿನಲ್ಲಿ ನೀಡಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಾಧಿಕಾರವು ಕರಡು ಬಿಲ್ಲನ್ನು ತಯಾರಿಸಿ ದಿನಾಂಕ: 03.04.2014 ರಂದು ಸರ್ಕಾರಕ್ಕೆ ಸಲ್ಲಿಸಿರುವ ಬಿಲ್ ಸರ್ಕಾರದ ಪರಿಶೀಲನೆ ಯಲ್ಲಿರುತ್ತದೆ.

ಆದರೆ, ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರ ನೀಡಿದಲ್ಲಿ ಹಾಗೂ ಪ್ರಾಧಿ ಕಾರಕ್ಕೆ ಅತೀ ಅವಶ್ಯಕ ಸಿಬ್ಬಂದಿಗಳನ್ನು ಒದಗಿಸಿದಲ್ಲಿ ಕೆರೆಯ ಒತ್ತುವರಿ ಹಾಗೂ ಕೆರೆಗಳಿನ್ನು ಪೊಲಿಸ್ಯಗೊಳಿಸುವಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ. ಇದರೊಂದಿಗೆ ಕೆರೆಯನ್ನು ಸಂರಕ್ಷಿಸುವುದರೊಂದಿಗೆ ಪರಿಸರವನ್ನು ಕಾಪಾಡುವುದಲ್ಲದೇ ವಿವಿಧೋದ್ದೇಶ ಯೋಜನಾ ವರದಿ ಯನ್ನು ತಯಾರಿಸಿ, ಕೆರೆಯ ಅಭಿವೃದ್ಧಿಯನ್ನು ಕೈಗೊಳ್ಳಲು ಸಾಧ್ಯವಾಗು ತ್ತದೆ.

ಉ) ಕೆರೆ ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಯು ಜಾರಿಯಾಗಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಪೂರ್ತ ಸ್ವಚ್ಛಪಾಗಿಟ್ಟುಕೊಳ್ಳಲು ಸಾಧ್ಯ ವಾಗುತ್ತದೆ. ಪ್ರಾಧಿಕಾರದ ಕಾರ್ಯವ್ಯಾಪ್ತಿಯು ಬೆಂಗಳೂರು ಮಹಾ

ನಗರ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಅಧಿಸೂಚಿತಗೊಂಡಿರುವ ಪ್ರದೇಶ, ಬೆಂಗಳೂರು ಹಸಿರು ಪಟ್ಟಿಯಲ್ಲಿರುವ ಪ್ರದೇಶ ಹಾಗೂ ರಾಜ್ಯದ ಇತರ ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿಯಲ್ಲಿಯ ಕುಡಿಯುವ ನೀರಿನ ಆಸರೆಯಾಗಿರುವ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ.

ಊ) ಬೆಂಗಳೂರು ನಗರದಲ್ಲಿ ಕೆರೆಗಳಿಗೆ ಕೊಳಚೆ ನೀರು ಸೇರದಂತೆ ಬಿ.ಡಬ್ಲ್ಯೂಎಸ್.ಎಸ್.ಬಿ. ಯವರು ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸುವ ಕಾರ್ಯವನ್ನು ಕೈಗೊಂಡಿದ್ದು, ಇದು 2014–15ರಲ್ಲಿ ಸಂಪೂರ್ಣಗೊಳ್ಳುವುದಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಫಿಡೆವಿಟ್ ಸಲ್ಲಿಸಿರುತ್ತದೆ. ತ್ಯಾಜ್ಯ ಮತ್ತು ಮಾಲಿನ್ಯವನ್ನು ತಡೆಗಟ್ಟದೆ ಯಾವುದೇ ಕೆರೆ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಬಿಡಬ್ಲ್ಯೂಎಸ್.ಎಸ್.ಬಿ ಯವರು ಕೆರೆಗೆ ಸೇರುವ ಕೊಳಚೆ ನೀರನ್ನು ಮಾರ್ಗಪಲ್ಲಟಗೊಳಿಸಿ, ಇಲ್ಲವೇ ಸಂಸ್ಕರಿಸಿದ ಶುದ್ಧೀಕರಿಸಿದ ನೀರನ್ನು ಕೆರೆಗೆ ಬಿಡಲು ಹಂತ ಹಂತವಾಗಿ ಕ್ರಮ ಕೈಗೊಳ್ಳುತ್ತಿದ್ದು, ಅಂತಹ ಕೆರೆಗಳಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ರಾಜ್ಯದ ಇತರ ನಗರಗಳಲ್ಲಿರುವ ಕೆರೆಗಳಿಗೆ ತ್ಯಾಜ್ಯ ಮತ್ತು ಮಾಲಿನ್ಯವನ್ನು ಸೇರುವುದನ್ನು ತಡೆಗಟ್ಟಲು ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ತ್ಯಾಜ್ಯ ಮತ್ತು ಮಾಲಿನ್ಯವನ್ನು ತಡೆಗಟ್ಟಲು ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗಳನ್ನು ಅಳವಡಿಸಿ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುವುದು.

ಸ್ವಚ್ಛ ರಾಜ್ಯ ನಿರ್ಮಾಣ

1064 (1905); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಸ್ವಚ್ಛ ರಾಜ್ಯ ಸಾಧನೆ ಹಂತಹಂತವಾಗಿ; ಮಾಡುವ ನಿರ್ಧಾರ ಕೈಗೊಂಡಿರುವ ಸರ್ಕಾರ ಆ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮವೇನು;